

ಕಾಸರಕೋಡು ಬೀಚಿನಲ್ಲಿರುವ ಆಮೆ ರಕ್ಷಣಾ ಪ್ರದೇಶದಲ್ಲಿ ಆಲೀವ್ ರಿಡ್ಲೆಗಳ ಹೆಜ್ಜೆಗುರುತುಗಳೊಂದಿಗೆ ಕಲಸಿಹೋಗಿರುವ ಮನುಷ್ಯನ ಹೆಜ್ಜೆಗುರುತುಗಳು



ಕಡಲ ಉಡಿಯಲ್ಲಿ ಕಡಲಾಮೆ ಮೊಟ್ಟೆಗಳ ಸಂರಕ್ಷಣೆ

ಎತ್ತಿ ಹಾಕಿದ ಹಾಗೆಲ್ಲ ಮರಳು ಮತ್ತೆ ಗುಂಡಿಯೊಳಕ್ಕೇ ಜಾರಿ ಬೀಳುತ್ತಿರುತ್ತದೆ. ಎರಡು ಮೂರು ಗಂಟೆಗಳ ಕಾಲ ಗುಂಡಿ ತೋಡಿ 80–100–120 ಮೊಟ್ಟೆಗಳನ್ನು ಪ್ರಸವಿಸುತ್ತದೆ. ಟೇಬಲ್ ಟೆನಿಸ್ ಗಾತ್ರ ಉರುಟಾದ ಬಿಳಿ ಮೊಟ್ಟೆಗಳು. (ಈ ಮೊಟ್ಟೆಗಳು ಏಕೆ ಅಂಡಾಕಾರ ಇರುವುದಿಲ್ಲ ಗೊತ್ತೆ? ಕೋಳಿ–ಕೊಕ್ಕರೆಗಳಂತೆ ಅಮ್ಮನ ಕಾವು ಪಡೆದು ಮರಿಯಾಗುವ ಮೊಟ್ಟೆಗಳು ಅಂಡಾಕಾರ ಇರುತ್ತವೆ. ಏಕೆಂದರೆ, ಅವು ಆಚೀಚೆ ಉರುಳಿ ಅಮ್ಮನಿಂದ ಹೋಗಲಾರವು. ಎಷ್ಟೇ ಜೋರಾಗಿ ತಳ್ಳಿದರೂ ಅಂಥ ಮೊಟ್ಟೆಗಳು ಅಲ್ಲೇ ಸುತ್ತುತ್ತವೆ ವಿನಾ ದೂರ ಉರುಳುವುದಿಲ್ಲ. ಆಮೆ ಹಾಗಲ್ಲ. ಅವುಗಳ ಮೊಟ್ಟೆಗಳು ತಗ್ಗಿನಲ್ಲಿ ಹೂತಿರುವುದರಿಂದ ಅವು ಆಚೀಚೆ ಹೋಗಲಾರವು; ಹಾಗಾಗಿ ಅಂಡಾಕಾರ ಇರಬೇಕಾಗಿಲ್ಲ). ಎಲ್ಲ ಮೊಟ್ಟೆಗಳನ್ನೂ ಗುಂಡಿಗೆ ಇಳಿಸಿದ ನಂತರ ಮತ್ತೆ ಪ್ರಯಾಸದಿಂದ ಮರಳನ್ನು ಮುಚ್ಚಬೇಕು. ಅಷ್ಟಾದರೆ ಸಾಲದು. ತಾನು ಎಲ್ಲಿ ಹೂತಿಟ್ಟಿದ್ದೇನೆಂದು ಬೇರೆಯವರಿಗೆ ಗೊತ್ತಾಗದ ಹಾಗೆ, ತನ್ನದೇ ಹೆಜ್ಜೆಗುರುತುಗಳನ್ನು ಅಳಿಸಿ ಹಾಕಬೇಕು.

"ಎಷ್ಟೋ ಬಾರಿ, ಅವು ಸುಳ್ಳುಗುಂಡಿಗಳನ್ನು ತೋಡುವುದೂ ಇದೆ" ಎನ್ನುತ್ತ ಡಾ. ಮೇಸ್ತ, ಅಂಥ